## ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
## ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಆರ್. ಆರ್. ಜನ್ನು | **ಪಿಡಬ್ಲ್ಯೂ.23** |
| **ತಂದೆಯ ಹೆಸರು** | : | ರಾಮಚಂದ್ರ ಜನ್ನು | **ಸಿಡಬ್ಲ್ಯೂ.70** |
| **ವಯಸ್ಸು** | : | **59 ವರ್ಷ** | **ಪ್ರಮಾಣ ವಚನ ಬೋಧಿಸಿದ** |
| **ಉದ್ಯೋಗ** | : | ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು. | **ದಿನಾಂಕ: 27.02.2019.** |
| **ವಾಸಸ್ಥಳ** | : | ಬೆಂಗಳೂರು. | |

### ಎಸ್‌ಪಿಪಿ ರವರಿಂದ: ಮುಖ್ಯ ವಿಚಾರಣೆ:

2016 ರಿಂದ 2017 ವರೆಗೆ ನಾನು ಕಾರ್ಮಿಕ ಆಯುಕ್ತರು, ಬೆಂಗಳೂರು ಅಂತ ಕೆಲಸ ಮಾಡಿರುತ್ತೇನೆ. ಆ ಸಮಯದಲ್ಲಿ ದಿ: 28.06.2014 ರಂದು ಎ.ಡಿ.ಜಿ.ಪಿ., ಲೋಕಾಯುಕ್ತ, ಬೆಂಗಳೂರು ಮತ್ತು ದಿ: 12.02.2016 ರಂದು ಪೊಲೀಸ್ ಐ.ಜಿ ಲೋಕಾಯುಕ್ತ, ಬೆಂಗಳೂರು ಇವರು ನಮ್ಮ ಕಚೇರಿಗೆ ಪತ್ರ ಬರೆದು ಆರೋಪಿ –1 ರಾಜಣ್ಣ ಇವರ ವಿರುದ್ಧ ಕ್ರಿಮಿನಲ್ ಕೇಸು ದಾಖಲು ಮಾಡಲು ಅಭಿಯೋಜನಾ ಮಂಜೂರಾತಿ ಕೋರಿ ಸಂಬಂಧಪಟ್ಟ ದಾಖಲೆ ಕಳುಹಿಸಿಕೊಟ್ಟಿದ್ದರು. ಆರೋಪಿ –1 ರಾಜಣ್ಣ ಈತನು ಕಾರ್ಮಿಕ ಇಲಾಖೆಯಲ್ಲಿ 2014 ರಲ್ಲಿ ಚಿತ್ರದುರ್ಗದಲ್ಲಿ ಕಾರ್ಮಿಕ ನಿರೀಕ್ಷಕರಾಗಿ ಕೆಲಸ ಮಾಡಿರುತ್ತಾರೆ. ಹೀಗಾಗಿ ಅಭಿಯೋಜನಾ ಮಂಜೂರಾತಿಗಾಗಿ ಪತ್ರವನ್ನು ನಮ್ಮ ಕಚೇರಿಗೆ ಕಳುಹಿಸಿಕೊಟ್ಟಿದರು. ಸದರಿ ಲೋಕಾಯುಕ್ತ ಪೊಲೀಸರು ನಮ್ಮ ಕಚೇರಿಗೆ ಕ್ರೈಂ ನಂ. 05/2014 ರಲ್ಲಿ ಪಿರ್ಯಾದಿ, ಎಫ್.ಐ.ಆರ್, ಕಚೇರಿ ಶೋಧನಾ ಮಹಜರ್, ಸೋರ್ಸ್ ವರದಿ, ಮನೆಯಲ್ಲಿ ರೈಡ್ ಮಾಡಿದ ಮಹಜರ್, ದಾಖಲೆಗಳನ್ನು ಕಳುಹಿಸಿಕೊಟ್ಟಿದ್ದರು. ಸದರಿ ದಾಖಲೆಗಳನ್ನು ಪರಿಶೀಲಿಸಿ ನೋಡಿದಾಗ ಆರೋಪಿ–1 ರಾಜಣ್ಣ ವಿರುದ್ಧ ಕ್ರಿಮಿನಲ್ ಕೇಸು ದಾಖಲು ಮಾಡಲು ನಮಗೆ ಮೇಲ್ನೋಟಕ್ಕೆ ಕಂಡು ಬಂದಿತು.

2. ಹೀಗಾಗಿ ನಾನು ದಿಃ 06.08.2016 ರಂದು ಸವಿಸ್ತಾರವಾದ ಆದೇಶವನ್ನು ಮಾಡಿ ಆರೋಪಿ–1 ರಾಜಣ್ಣ ಇವರ ವಿರುದ್ಧ , ಕ್ರಿಮಿನಲ್ ಕೇಸು ದಾಖಲು ಮಾಡಲು ಅಭಿಯೋಜನಾ ಮಂಜೂರಾತಿ ಆದೇಶ ಕೊಟ್ಟಿರುತ್ತೇನೆ . ಈಗ ತೋರಿಸಿದ ಆದೇಶ ನೋಡುತ್ತಿದ್ದೇನೆ . ಅದೇ ಆಗಿರುತ್ತದೆ . ಅದನ್ನು ನಿಪಿಃ 49 ಅಂತ ಗುರುತಿಸಲಾಯಿತು . ಸಾಕ್ಷಿ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿಪಿಃ 49(ಎ) ಅಂತ ಗುರುತಿಸಲಾಯಿತು .

## ಆರೋಪಿತರ ಪರ ಶ್ರೀ ಶಂಕರ್ ಹೆಗಡೆ ವಕೀಲರಿಂದಃ ಪಾಟೀ ಸವಾಲುಃ

3. ಎ.ಡಿ.ಜಿ.ಪಿ., ಲೋಕಾಯುಕ್ತ ಇವರು ಕಳುಹಿಸಿಕೊಟ್ಟ ಸಂಪೂರ್ಣ ಕಡತ ಎಷ್ಟು ಪುಟ ಒಳಗೊಂಡಿತ್ತು ಅಂತ ಹೇಳಲು ಬರುವುದಿಲ್ಲ . ಬಹು ತೇಕ ಅಂದಾಜು 70–80 ಪುಟ ಇರಬೇಕು , ಬಹಳ ದಿವಸ ಆಗಿದೆ ನೆನಪಿಲ್ಲ . ಎ.ಡಿ.ಜಿ.ಪಿ., ಲೋಕಾಯುಕ್ತ ಇವರು ನಮ್ಮ ಕಚೇರಿಗೆ ಕಳುಹಿಸಿಕೊಟ್ಟಂತಹ ಮೊ . ನಂ. 05/2014 ರಲ್ಲಿಯ ಎಲ್ಲಾ ದಾಖಲೆಗಳ ಬಗ್ಗೆ ನಿಪಿಃ 49 ಪ್ರಸ್ತಾವನೆಯಲ್ಲಿ ಬರವಣಿಗೆ ಮಾಡಿದ್ದೇನೆ . ಅಂದರೆ ಮಹಜರ್ ಎಫ್.ಐ.ಆರ್. ಕಳುಹಿಸಿಕೊಟ್ಟ ಬಗ್ಗೆ ಬರೆದಿದ್ದೇನೆ . ನಿಪಿಃ 49 ರ ಪುಟ 3 ರಲ್ಲಿರುವ ಪ್ಯಾರ 2 , 3 ರಲ್ಲಿ ಕಾಣಿಸಿರುವ ಆರೋಪಿ ಮಾಡಿದ ಕೃತ್ಯ ಅಪರಾಧ ಅಂತ ನನಗೆ ಮೇಲ್ನೋಟಕ್ಕೆ ಕಂಡು ಬಂದಿತು . ನನ್ನ ಸೇವಾ ಅವಧಿಯಲ್ಲಿ ನಾನು ಸಾಕಷ್ಟು ನೌಕರರ ವಿರುದ್ಧ , ಇಲಾಖೆ ಪರವಾಗಿ , ಸರ್ಕಾರದ ಪರವಾಗಿ ಅಭಿಯೋಜನಾ ಮಂಜೂರಾತಿ ಕೊಟ್ಟಿದ್ದೇನೆ . ಅಂತಹ ಮಂಜೂರಾತಿ ಆದೇಶದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಟ್ಟ ದಾಖಲೆಗಳನ್ನು ಮಾತ್ರ ನಾನು ಆದೇಶದಲ್ಲಿ ಪ್ರಸ್ತಾವನೆ ಮಾಡಿದ್ದೇನೆ.

4. ಲೋಕಾಯುಕ್ತ ಪೊಲೀಸರು ಪಂಚನಾಮೆ ಕಳುಹಿಸಿಕೊಟ್ಟಿದ್ದರು . ಆದರೆ ಸಾಕ್ಷಿದಾರರ ಹೇಳಿಕೆಗಳನ್ನು ಕಳುಹಿಸಿಕೊಟ್ಟಿರುವುದಿಲ್ಲ . ಆರೋಪಿಗೆ ಚೆಕ್ ಪಿರಿಯಡ್ ನಲ್ಲಿ ಎಷ್ಟು ಪ್ರಮಾಣದ ಆದಾಯ ಬಂದಿದೆ , ಎಷ್ಟು ಮೌಲ್ಯದ ಆಸ್ತಿ ಹೊಂದಿದ್ದಾನೆ ಅಂತ ನಿಪಿಃ 49

ಆದೇಶದಲ್ಲಿ ಹೇಳಿರುವುದಿಲ್ಲ . ಅದೇ ರೀತಿ ಆರೋಪಿ –1 ರಾಜಣ್ಣ ಇವರು ಚೆಕ್ ಪಿರಿಯಡ್ ನಲ್ಲಿ ಎಷ್ಟು ಹಣ ಖರ್ಚು ಮಾಡಿದ್ದಾನೆ , ಎಷ್ಟು ಹೆಚ್ಚಿನ ಪ್ರಮಾಣದ ಆಸ್ತಿ ಹೊಂದಿದ್ದಾನೆ ಅಂತ ನಿಪಿಃ 49 ರಲ್ಲಿ ಹೇಳಿರುವುದಿಲ್ಲ . ಎ.ಡಿ.ಜಿ.ಪಿ., ಲೋಕಾಯುಕ್ತ ಮತ್ತು ಲೋಕಾಯುಕ್ತ ಪೊಲೀಸರು ನನಗೆ ಯಾವುದೇ ದಾಖಲೆ ಕಳುಹಿಸಿಲ್ಲ ಎನ್ನುವುದು ಸುಳ್ಳು . ನಾನು ಯಾಂತ್ರಿಕವಾಗಿ ನಿಪಿಃ 49 ಆದೇಶ ಕೊಟ್ಟಿದ್ದೇನೆ ಎನ್ನುವುದು ಸುಳ್ಳು .

## ಮರು ವಿಚಾರಣೆಃ ಎಸ್ ಪಿ ಪಿ ರವರಿಂದಃ ಅನುಮತಿ ಮೇರೆಗೆ

5. ಆರೋಪಿ 1 ರಾಜಣ್ಣ ಸರ್ಕಾರಿ ನೌಕರ ಆಗಿದ್ದರಿಂದ , ಹೆಚ್ಚಿನ ಪ್ರಮಾಣದ ಆಸ್ತಿ ಹೊಂದಿದ್ದರಿಂದ ಕಲಂ 13(1) (ಇ) , ಸಹ ಕಲಂ 13(2) ಪಿ.ಸಿ. ಕಾಯಿದೆ ಅಡಿಯಲ್ಲಿ ಆ ಅಪರಾಧಕ್ಕೆ ಮಂಜೂರಾತಿ ಕೊಟ್ಟಿದ್ದೇನೆ .

## ಆರೋಪಿತರ ಪರ ಶ್ರೀ ಶಂಕರ್ ಹೆಗಡೆ ವಕೀಲರಿಂದಃ ಮರು ಪಾಟೀ ಸವಾಲುಃ

6. ಕಲಂ 13(1) (ಇ) ಪಿ.ಸಿ. ಕಾಯಿದೆ ಏನು ಹೇಳುತ್ತದೆ ಅನ್ನುವುದು ನನಗೆ ಗೊತ್ತಿಲ್ಲ . ಲೋಕಾಯುಕ್ತ ಪೊಲೀಸರು ಬರೆದು ಕೊಟ್ಟಂತಹ ಆದೇಶಕ್ಕೆ ನಾನು ಸಹಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ .

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.